# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1321
2 ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3 ವಿಷಯ : ರೇಷ್ಮೆ ಇಲಾಖೆಯಿಂದ ಪರಿಶಿಷ್ಠ ಜಾತಿ / ಪರಿಶಿಷ್ಟ ವರ್ಗದವರಿಗೆ ಸೌಲಭ್ಯಗಳು
4 ಉತ್ತರಿಸುವ ದಿನಾಂಕ : 27-02-2018
5 ಉತ್ತರಿಸುವವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರೇಷ್ಮೆ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಿಗೆ ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ಯಾವ ಸೌಲಭ್ಯವನ್ನು ನೀಡಲಾಗುತ್ತಿದೆ. | ರೇಷ್ಮೆ ಇಲಾಖೆಯಿಂದ ಎಸ್.ಸಿ.ಪಿ/ ಟಿ.ಎಸ್.ಪಿ ಅಡಿಯಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ರೇಷ್ಮೆ ಬೆಳೆಗಾರರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿದೆ.<br>1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ.<br>2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ – ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.<br>3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಸಹಾಯಧನ.<br>4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ.<br>5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ.<br>6. ರೇಷ್ಮೆ ಹುಳು ಸಾಕಣೆಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ.<br>7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.<br>8. ದ್ವಿತಳ ಚಾಕಿ ವೆಚ್ಚಕ್ಕೆ ಸಹಾಯಧನ.<br>9. ಚಾಕಿ ಸಾಕಾಣಿಕಾ ಕೇಂದ್ರಗಳ ಸ್ಥಾಪನೆಗೆ ಸಹಾಯಧನ.<br>10. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ.<br>11. ಮೈಸೂರು ತಳ ಹಾಗೂ ದ್ವಿತಳಿ ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಬೋನಸ್ ಹಾಗೂ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>12. ರೀಲಿಂಗ್ ಸಲಕರಣೆಗಳ ಖರೀದಿಗೆ ಸಹಾಯಧನ<br>13. ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ<br>14. ಕಾಟೇಜ್ ಬೇಸಿನ್ ಘಟಕ ಸ್ಥಾಪಿಸಲು ಸಹಾಯಧನ<br>15. ಮಲ್ಟಿ ಎಂಡ್ ರೀಲಿಂಗ್ ಘಟಕ ಸ್ಥಾಪಿಸಲು ಸಹಾಯಧನ<br>16. ಸ್ವಯಂಚಾಲಿತ ರೀಲಿಂಗ್ ಘಟಕ ಸ್ಥಾಪಿಸಲು ಸಹಾಯಧನ<br>17. ಬಾಯ್ಲರ್, ಜನರೇಟರ್, ಸೌರಶಕ್ತಿ ವಾಟರ್ ಹೀಟರ್, ಹೀಟ್ ರಿಕವರಿ ಯೂನಿಟ್ ಅಳವಡಿಕೆಗೆ ಸಹಾಯಧನ |

| | | |
|---|---|---|
| ಆ | ಈ ಯೋಜನೆಯಡಿ ಪ್ರಯೋಜನ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು: ಯಾವ ರೀತಿ ಸಹಾಯಧನ ನೀಡಲಾಗಿದೆ: (ಸಹಾಯಧನದ ಸಂಪೂರ್ಣ ವಿವರ ನೀಡುವುದು) | 2017-18ನೇ ಸಾಲಿನ ಜನವರಿ-2018ರ ಅಂತ್ಯಕ್ಕೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆ ಅಡಿಯಲ್ಲಿ 6097 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.<br><br>2017-18ನೇ ಸಾಲಿನ ವಿಶೇಷ ಘಟಕ/ಗಿರಿಜನ ಉಪಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಯೋ/ಪಿಎಸ್-3/ಎಸ್‌ಸಿಪಿ-ಟಿಎಸ್‌ಪಿ/ಮಾ/56/17-18, ದಿನಾಂಕ: 21-06-2017 ರನ್ವಯ ಸಹಾಯಧನ ನೀಡಲಾಗಿದೆ. |
| ಇ | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು) | ರೇಷ್ಮೆ ಇಲಾಖೆಯಿಂದ 2016-17 ಮತ್ತು 2017-18ನೇ ಸಾಲಿನಲ್ಲಿ (ಜನವರಿ-18ರ ಅಂತ್ಯಕ್ಕೆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಹಾಯಧನ ನೀಡಲಾದ ಫಲಾನುಭವಿಗಳ ವಿವರ ಕೆಳಕಂಡಂತಿದೆ. |

| ಜಿಲ್ಲೆ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ | |
|---|---|---|---|
| | | 2016-17 | 2017-18 |
| ಮೈಸೂರು | ಮೈಸೂರು | 23 | 23 |
| | ತಿ.ನರಸೀಪುರ | 29 | 23 |
| | ನಂಜನಗೂಡು | 5 | 20 |
| | ಹೆಚ್.ಡಿ.ಕೋಟೆ | 65 | 75 |
| | ಕೆ.ಆರ್.ನಗರ | 17 | 9 |
| | ಹುಣಸೂರು | 7 | 16 |
| | ಪಿರಿಯಾಪಟ್ಟಣ | 12 | 12 |
| ಚಾಮರಾಜ ನಗರ | ಚಾಮರಾಜನಗರ | 15 | 09 |
| | ಕೊಳ್ಳೇಗಾಲ | 03 | 04 |
| | ಗುಂಡ್ಲುಪೇಟೆ | - | 05 |
| | ಯಳಂದೂರು | 06 | - |

ತೋಇ 44 ರೇಕ್ರವಿ 2018

(ಎ. ಮಂಜು)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು